ಶ್ರೀ ಶರಣಬಸಪ್ಪ ದರ್ಶನಾಪುರ : ಬೆಳ್ತಂಗಡಿ ತಾಲ್ಲೂಕು ಎಂದು ಹೇಳುತ್ತಿದ್ದೀರಿ, ಯಾವುದರಿಂದಲೂ ನಾವು ಕೊಡಬಹುದು. ಬೆಳ್ತಂಗಡಿ ಸ್ಟೇಷನ್‌ನಿಂದ ಕೊಡಬಾರದು ಎಂದು ಏನೂ ಇಲ್ಲ. ಆ ಸಬ್ ಸ್ಟೇಷನ್‌ನಿಂದ ಅಲ್ಲಿ ಬರತಕ್ಕಂತಹ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕೊಡಲು ನಾವು ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ : ಇದ್ದ ಏರಿಯಾಕ್ಕೆ ಕೊಡಲು ಆಗುತ್ತಾ ಇಲ್ಲ. ಒಂದು ಗ್ರಾಮದ ಒಂದು, ಎರಡು ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಟ್ಟು, ಇಡೀ ಹಳ್ಳಿಗೆ ಕೊಟ್ಟಿದ್ದೇವೆ ಎಂದು ಹೇಳಿಕೆಯನ್ನು ಕೊಡುತ್ತಿದ್ದೀರಿ. ಆದ್ದರಿಂದ ಈ ಹಿಂದೆ ಬಂದ ಅರ್ಜಿಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದು ಕೇಳಿದ್ದೇವೆ.

ಉಪಾಧ್ಯಕ್ಷರು : ಅವರು ವಿವರವಾದ ಮಾಹಿತಿಯನ್ನು ಕೇಳುತ್ತಿದ್ದಾರೆ, ಅದನ್ನು ಒದಗಿಸಿಕೊಡಿ.

ಶ್ರೀ ಕೆ. ಜಯರಾಮಶೆಟ್ಟಿ : ಬಂದ ಅರ್ಜಿಗಳನ್ನು ಪುರಸ್ಕಾರ ಮಾಡಿ.

ಶ್ರೀ ಶರಣಬಸಪ್ಪ ದರ್ಶನಾಪುರ : ಯಾವ ಹಳ್ಳಿಗೆ ವಿದ್ಯುತ್ ಕಲ್ಪಿಸಿಲ್ಲ ಎಂಬುದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಸೂಕ್ತ ಆಜ್ಞೆಯನ್ನು ನೀಡುತ್ತೇವೆ. ಅವರು ಆ ಹಳ್ಳಿಗಳಿಗೆ ವಿದ್ಯುತ್ ಕಲ್ಪಿಸುತ್ತಾರೆ. ಆ ಹಳ್ಳಿಗಳ ಹೆಸರುಗಳನ್ನು ಕೊಡಿ.

ಉಪಾಧ್ಯಕ್ಷರು : ಆ ಹಳ್ಳಿಗಳ ಹೆಸರುಗಳನ್ನು ಅವರಿಗೆ ಕೊಡಿ.

ಕುಂದಾಪುರ ತಾಲ್ಲೂಕಿನ ತಲ್ಲೂರು – ಹೆಮ್ಮಡಿಯಲ್ಲಿ ವಿದ್ಯುತ್ ಸಬ್‌ಸ್ಟೇಷನ್ ಪ್ರಾರಂಭ

396 - ಶ್ರೀ ಐ.ಎಮ್. ಜಯರಾಮಶೆಟ್ಟಿ (ಬೈಂದೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ - ತಾಲ್ಲೂರು ಹೆಮ್ಮಡಿಯಲ್ಲಿ ವಿದ್ಯುತ್ ಸಬ್ ಸ್ಟೇಷನ್ ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಸಬ್- ಸ್ಟೇಷನ್ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಶ್ರೀ ಶರಣಪ್ಪಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಕುಂದಾಪುರ ತಾಲ್ಲೂಕಿನ ತಾಲ್ಲೂಕು-ಹೆಮ್ಮಾಡಿಯಲ್ಲಿ 33:11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲುಮಂಡಳಿಯು ಉದ್ದೇಶಿಸಿದೆ.

ಆ) 1997-98ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಾಗಾರಿಯನ್ನು ಸೇರಿಸಲಾಗಿದೆ. ಈ ಕಾರ್ಯವನ್ನು ಶೀಘ್ರವೇ ಪ್ರಾರಂಭಿಸಲಾಗುವುದು.

ಶ್ರೀ ಐ.ಎಮ್. ಜಯರಾಮಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ಸಚಿವರನ್ನು ವಂದಿಸುತ್ತಾ, ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದ್ದಾರೆ. ಅದು ಗ್ರಾಮಾಂತರ ಪ್ರದೇಶಗಳ ಕೆಲಸವಾದ್ದರಿಂದ

ಆದಷ್ಟು ಬೇಗ ಎಂದರೆ, ಎಷ್ಟು ಸಮಯದಲ್ಲಿ ಮಾಡುತ್ತಾರೆ ಎಂದು ಒಂದು ಹೇಳಿಕೆಯನ್ನು ಕೊಟ್ಟರೆ ಸಂತೋಷವಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಇದನ್ನು ಬಜೆಟ್‌ನಲ್ಲಿ ಸೇರಿಸಿಕೊಂಡಿದ್ದೇವೆ. ಆದಷ್ಟು ತೀವ್ರಗತಿಯಲ್ಲಿ ಈ ಕಾರ್ಯವನ್ನು ಮಾಡುತ್ತೇವೆ.

SRI. I.M. JAYARAMA SHETTY : I am thankful to the Hon.Minister.

ಹೊನ್ನಾವರ ತಾಲ್ಲೂಕಿನ ಮಂಕಿ ಏತ ನೀರಾವರಿ ಯೋಜನೆ.

397 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಮಂಕಿಯ ಏತ ನೀರಾವರಿ ಯೋಜನೆ ಸರ್ವೆ ಮಾಡಿ 15 ವರ್ಷ ಕಳೆದರೂ ಕಾರ್ಯಗತವಾಗಿಲ್ಲದಿರುವುದು ನಿಜವೇ?

ಆ) ಈ ವರ್ಷವು ಟೋಕನ್ ಗ್ರ್ಯಾಂಟ್ ಮಾತ್ರ ನೀಡಿರುವುದು ನಿಜವೇ, ಅನುದಾನದ 3:1 ಭಾಗವನ್ನು ಮಂಜೂರು ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಈ ಏತ ನೀರಾವರಿ ಯೋಜನೆಯ ಸರ್ವೆ ಕಾರ್ಯವನ್ನು 10 ವರ್ಷಗಳ ಹಿಂದೆ ಸ್ಥಾಪಿತಗೊಂಡ ಕೃಷ್ಣಾ ಜಲಾಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಲಾಗಿತ್ತು. ಹಾಗೂ ಯೋಜನೆಯು ಫಲಕಾರಿಯಲ್ಲವೆಂದು ಕಂಡು ಬಂದಿದ್ದರಿಂದ ಕೈಬಿಡಲಾಗಿತ್ತು. 1996-97ರಲ್ಲಿ ಸಣ್ಣ ನೀರಾವರಿ ವಲಯದಿಂದ ಪುನಃ ಸರ್ವೆ ಮಾಡಲಾಗಿದ್ದು, ಈ ಯೋಜನೆಯ ಅಂದಾಜು ವೆಚ್ಚ ಸುಮಾರು 222.00 ಲಕ್ಷ ಆಗಿರುತ್ತದೆ.

ಆ) ಹೌದು, ಯೋಜನೆ ಫಲಪ್ರದವೆಂದು ಕಂಡುಬಂದಲ್ಲಿ, ಅನುದಾನ ಒದಗಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಶಿವಾನಂದ ನಾಯ್ಕ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಮಾನ್ಯ ಸಚಿವರಿಗೆ ಇದರ ಬಗ್ಗೆ ಸೂಕ್ತವಾದ ಮಾಹಿತಿ ಸಿಗಲಿಲ್ಲ ಎನ್ನಿಸುತ್ತದೆ. ಈ ಹಿಂದೆ ಬಜೆಟ್ ಪೂರ್ವದಲ್ಲಿ ಮಾನ್ಯ ಸಚಿವರಿಗೆ ಈ ಮಂಕಿ ಏತ ನೀರಾವರಿ ಯೋಜನೆಯಿಂದ ಏನೇನು ಲಾಭಗಳು ಇವೆ, ಇದರಿಂದ ಎಷ್ಟು ಜನ ರೈತರಿಗೆ ಅದರಿಂದ ಲಾಭವಾಗುತ್ತದೆ ಎನ್ನುವಂತಹ ವಿಷಯವನ್ನು ಅವರ ಗಮನಕ್ಕೆ ತಂದಿದ್ದೇನೆ. ಆದರೂ ಈ ಸಂದರ್ಭದಲ್ಲಿ ಪುನಃ ಅವರ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಮಂಕಿ ಏತನೀರಾವರಿ ಯೋಜನೆಯಿಂದ ಸಾಮಾನ್ಯವಾಗಿ 900 ಎಕರೆಗೆ 3 ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಅಷ್ಟೇ ಅಲ್ಲ ಸುಮಾರು 400 ಕುಟುಂಬಗಳಿಗೆ